# ಕರ್ನಾಟಕ ಸರ್ಕಾರ

(ಸಾರಿಗೆ ಇಲಾಖೆ)

ಸಂಖ್ಯೆ:ಸ.ಪ್ರಾ.ಅ/ಪುಣಜನೂರು/2016-17

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ, ಪುಣಜನೂರು ತನಿಖಾ ಠಾಣೆ,
ಪುಣಜನೂರು,
ದೂರವಾಣಿ ಸಂಕ್ಯೆ:08226-211479
ದಿನಾಂಕ:16.01.2018

ರವರಿಗೆ,
ಮಾನ್ಯ ಸಾರಿಗೆ ಆಯುಕ್ತರು,
ಬೆಂಗಳೂರು.

ಮಾನ್ಯರೆ

ವಿಷಯ:- ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005ರ ಕಾಲಂ (1) (ಬಿ) ಅನುಸಾರ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗೆ ಸಂಬಂಧಿಸಿದಂತೆ, ದಿ:31-03-2012 ರಲ್ಲಿದ್ದಂತೆ ಕಛೇರಿಯ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

~~()~~

ಮಾಹಿತಿ ಹಕ್ಕು ಅಧಿನಿಯಮ 2005ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಅಧಿನಿಯಮ 2005ರ (Enroll Act of 2005) Section 5(1) 5(2) ಮತ್ತು 19(1) ರಲ್ಲಿ ಪ್ರಸಕ್ತವಾದ ಅಧಿಕಾರವನ್ನು ಚಲಾಯಿಸಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ವ್ಯಾಪ್ತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಇಲಾಖಾ ಮುಖ್ಯಸ್ಥರಿಂದ ಸಾರಿಗೆ ಆಯುಕ್ತರು ಬೆಂಗಳೂರು ಈ ಕೆಳಕಂಡಂತೆ ನೇಮಿಸಿರುತ್ತದೆ.

| ಕ್ರ.ಸ | | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1), 5(2) ಪ್ರಕಾರ | | ಮಾಹಿತಿ ಪಡೆಯುವ ಹಕ್ಕು ಕಾಯ್ದೆಕಲಂ 19 ಬಿ ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 01 | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ, ಪುಣಜನೂರು ತನಿಖಾ ಠಾಣೆ, ಪುಣಜನೂರು, | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಉಪ ಸಾರಿಗೆ ಆಯುಕ್ತರು, ಮೈಸೂರು ವಿಭಾಗ, ಮೈಸೂರು |
| | | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ | ದ್ವಿತೀಯ ದರ್ಜೆ ಸಹಾಯಕರು | |

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಅಧಿನಿಯಮದ ಪ್ರಕಾರ ಕಛೇರಿಯ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತೆ ಇರುತ್ತದೆ.

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳವರ ಕಛೇರಿಯಲ್ಲಿನ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005

ಅಧ್ಯಾಯ:2ರ ಪರಿಛೇದ, ಸೆಕ್ಷನ್ 4(1) (ಬಿ) 1 ರ ಅನ್ವಯ:

1. ಇಲಾಖೆಯ ಪರಿಚಯ ಕಾರ್ಯ ಚಟುವಟಿಕೆಗಳನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ಸಾರಿಗೆ ಇಲಾಖೆಯು ಸರ್ಕಾರದ ಬಹು ದೊಡ್ಡ ಇಲಾಖೆಯಾಗಿರುತ್ತದೆ. ಸರ್ಕಾರವು ಸಾರಿಗೆ ಇಲಾಖೆಗೆ ಪ್ರತಿ ವರ್ಷ ರಾಜಸ್ವ ವಸೂಲು ಮಾಡಲು ಗುರಿಯನ್ನು ನಿಗದಿಪಡಿಸುತ್ತದೆ. ಅದರ ಪ್ರಕಾರ ಸಾರಿಗೆ ಆಯುಕ್ತರು ಬೆಂಗಳೂರುರವರು ಪ್ರತಿ ವರ್ಷವು ಪುಣಜನೂರು ತನಿಖಾ ಠಾಣೆಗೆ ರಾಜಸ್ವವನ್ನು ನಿಗದಿಪಡಿಸುತ್ತದೆ.

**ಅ**. ನಿಗದಿಪಡಿಸಿದ ರಾಜಸ್ವವನ್ನು ಹೊರ ರಾಜ್ಯಗಳಿಂದ ಬರುವ ಪ್ರವಾಸಿ ವಾಹನಗಳಿಂದ ತೆರಿಗೆಯನ್ನು ವಸೂಲಿ ಮಾಡಲಾಗುತ್ತದೆ.

**ಆ.**ಮೋಟಾರು ವಾಹನ ಕಾಯ್ದೆ 1988 ರ ಕಲಂ 88(8) ರ ಅಡಿಯಲ್ಲಿ ಪ್ರವಾಸಿ ವಾಹನಗಳಿಗೆ ವಿಶೇಷ ರಹದಾರಿ ಮತ್ತು

**ಇ.** 1988 ರ ಕಲಂ 87 ರ ಪ್ರಕಾರ ಸರಕು ಸಾಗಾಣಿಕೆ ವಾಹನಗಳಿಗೆ ತಾತ್ಕಾಲಿಕ ರಹದಾರಿಗಳನ್ನು ನೀಡುವ ಕಾರ್ಯಚಟುವಟಿಕೆ.

**ಈ.** ಪ್ರವರ್ಗ ವಾಹನಗಳಲ್ಲಿ ಕಾನೂನು ನಿಯಮ ಬಾಹಿರವಾಗಿರುವ ವಾಹನಗಳಿಂದ ಮೋಟಾರು ವಾಹನ ಕಾಯಿದೆ 1988 ರ ಕಲಂ 200 ರಲ್ಲಿ ಸ್ಥಳದಂಡ ವಸೂಲು ಮಾಡುವ ಕಾರ್ಯ ಚಟುವಟಿಕೆ.

**ಉ.** ಕಲಂ 200 ಕ್ಕೆ ಹೊರತುಪಡಿಸಿದ ಅಪಾದನೆಗಳಿಗೆ ಸ್ಥಳೀಯ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವ ಕಾರ್ಯ ಚಟುವಟಿಕೆ.

ಊ.ಪ್ರವರ್ತನಾ ಚಟುವಟಿಕೆಗಳ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ನೀಡುವ ಕಾರ್ಯಚಟುವಟಿಕೆ.

**ಋ.**

(a) ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳವರ ಈ ಕಛೇರಿಯಲ್ಲಿ 01 ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹುದ್ದ ಮಾತ್ರ ಇರುತ್ತದೆ.

(b) ತನಿಖಾ ಠಾಣೆಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ಚಾಮರಾಜನಗರ ಇಲ್ಲಿಂದ ಪ್ರತಿವಾರಕ್ಕೆ ಮೂವರು ಮೋಟಾರು ವಾಹನ ನಿರೀಕ್ಷಕರನ್ನು ಜಂಟಿ ಸಾರಿಗೆ ಆಯುಕ್ತರು ಪ್ರವರ್ತನ(ದ) ಬೆಂಗಳೂರು ಇವರು ನಿಯೋಜನೆ ಮಾಡುತ್ತಾರೆ. ಅದರಂತೆ ಹಿ/ಮೋಟಾರು ವಾಹನ ನಿರೀಕ್ಷಕರು ಕರ್ತವ್ಯ ನಿರ್ವಹಿಸುತ್ತಾರೆ.

(c) ಈ ತನಿಖಾ ಠಾಣೆಯಲ್ಲಿ ಒಬ್ಬರು ದ್ವಿತೀಯ ದರ್ಜೆ ಸಹಾಯಕರು ಪ್ರಾ.ಸಾ.ಅ ಕಛೇರಿ ಚಾಮರಾಜನಗರ ಇಲ್ಲಿಂದ ನಿಯೋಜನೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರನ್ನು ಉಪ ಸಾರಿಗೆ ಆಯುಕ್ತರು ಮೈಸೂರು ವಿಭಾಗ, ಮೈಸೂರು ಇವರು ನಿಯೋಜನೆ ಮಾಡಿರುತ್ತಾರೆ. ಇವರು ದೈನಂದಿನ ರಾಜಸ್ವ ವಸೂಲಾತಿಯನ್ನು ನಗದು ವಹಿಗಳಿಗೆ ನಮೂದಿಸುವುದು. ಸರ್ಕಾರಕ್ಕೆ ಹಣ ಜಮಾವಣೆ ಮಾಡವರು, ಹಾಗೂ ಕಛೇರಿಯ ಸಿಬ್ಬಂದಿ ಹಾಗೂ ಇತರ ಕಾರ್ಯಗಳನ್ನು ನಿರ್ವಹಿಸುವರು.

(d) ಸಾರಿಗೆ ಆಯುಕ್ತರ ಆದೇಶದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಾಮರಾಜನಗರ ಇವರು ಪ್ರತಿಮಾಹೆ ಇಬ್ಬರು ಡಿ.ಗುಂಪು ನೌಕರರನ್ನು ತನಿಖಾಠಾಣೆಗೆ ನಿಯೋಜನೆ ಮಾಡುತ್ತಾರೆ ಇವರು ಹೊರರಾಜ್ಯಗಳಿಂದ ಬರುವ ಪ್ರವಾಸಿ ವಾಹನಗಳು ಇತರೆ ವಾಹನಗಳನ್ನು ನಿಲ್ಲಿಸಿ ಪರಿಶೀಲನೆಗೆ ಕಳುಹಿಸುವ ಕೆಲಸ ನಿರ್ವಹಿಸುತ್ತಾರೆ.

(e) ಸರ್ಕಾರದ ಆದೇಶ ಸಂಖ್ಯೆ ಸಾರಿಇ/167/ಸಾಇಸೇ/08 ಪ್ರಕಾರ ದಿನಾಂಕ:29-08-2008 ಮತ್ತು ಸಾರಿಗೆ ಆಯುಕ್ತರು ಇವರ ಪತ್ರಸಂಖ್ಯೆ ಸಾಆ/ಸಿ-2/ಪಿ.ಆರ್.86/08-09 ದಿನಾಂಕ:30-08-2008ರ ಪ್ರಕಾರ ಈ ತನಿಖಾ ಠಾಣೆಗೆ ಗೃಹ

ರಕ್ಷಕರನ್ನು ನಿಯೋಜನೆ ಮಾಡಿದ್ದು, ಅದರಲ್ಲಿ 03 ಜನ ಗೃಹರಕ್ಷಕರನ್ನು ಸಮಾದೇಷ್ಟರು ನಿಯೋಜನೆ ಮಾಡಿರುತ್ತಾರೆ. ಅವರುಗಳು ತನಿಖಾಠಾಣೆಯ ಮುಂದೆ ಬರುವ ವಾಹನಗಳನ್ನು ತಡೆಯುವ ಕೆಲಸ ನಿರ್ವಹಿಸುತ್ತಿದ್ದಾರೆ.

## II. ಇಲಾಖೆಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಜವಬ್ದಾರಿಗಳು:

| | |
|---|---|
| ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | ಇವರು ಕಛೇರಿಯ ಮುಖ್ಯಸ್ಥರು ಮತ್ತು ಆಡಳಿತ ಮೇಲ್ವಿಚಾರಣೆ ಹಣಕಾಸು ವಿಷಯಕ್ಕೆ ಸಂಬಂಧಪಟ್ಟ ಕರ್ತವ್ಯ ಜವಬ್ದಾರಿಗಳ ಸಭೆಗಳಲ್ಲಿ ಭಾಗವಹಿಸುವುದು. ತಪಾಸಣೆ ಮಾಡಿದ ಕಾರ್ಯಗಳ ಮೇಲ್ವಿಚಾರಣೆ ಮಾಡುವ ಕಾರ್ಯಗಳ ಜವಬ್ದಾರಿಯಾಗಿರುತ್ತದೆ. |
| ದ್ವಿತೀಯ ದರ್ಜೆ ಸಹಾಯಕ | ಇವರು ರಾಜಸ್ವ ವಸೂಲಾತಿಯನ್ನು ನಗದು ವಹಿಗಳಿಗೆ ನಮೂದು ತೆಗೆದುಕೊಂಡು ಸರ್ಕಾರಕ್ಕೆ ಬ್ಯಾಂಕ್ ಮುಖಾಂತರ ಜಮಾ ಮಾಡುವುದು, ಬಿಲ್ಲುಗಳನ್ನು ತಯಾರಿಸುವುದು, ಅಂಕಿ-ಅಂಶಗಳನ್ನು ತಯಾರಿಸುವುದು, ಮಾಹಿತಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು, ನಗದು ವಹಿಗಳನ್ನು ಬರೆಯುವುದು, ಸಾರ್ವಜನಿಕರಿಂದ ಬಂದ ಪತ್ರಗಳನ್ನು ಸ್ವೀಕರಿಸುವುದು, ಪತ್ರಗಳನ್ನು ವಿಲೇವಾರಿ ಮಾಡುವುದು, ಇತ್ಯಾದಿ ಇನ್ನಿತರ ಕಾರ್ಯಗಳನ್ನು ನಿರ್ವಹಿಸುವುದಾಗಿರುತ್ತದೆ. |

## III. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ವಿಧಾನ:-

ಸರ್ಕಾರದಿಂದ ಸಾರಿಗೆ ಆಯುಕ್ತರು, ಮತ್ತು ಉಪಸಾರಿಗೆ ಆಯುಕ್ತರು, ಸಾರ್ವಜನಿಕರು ಇನ್ನಿತರೆ ಯಾವುದೇ ಪತ್ರಗಳು ಬಂದಲ್ಲಿ ಸ್ವೀಕೃತಿಯ ರಿಜಿಸ್ಟರ್ ಮೂಲಕ ತೆಗೆದುಕೊಂಡು, ವಿಷಯ ನಿರ್ವಾಹಕರು ಪರಿಶೀಲಿಸಿ ಕಡತವನ್ನು ಮಂಡಿಸಿದ ನಂತರ ಪರಿಶೀಲಿಸಿ ತೆಗೆದುಕೊಳ್ಳಬೇಕದಾ ಅನುಕ್ರಮದ ಕುರಿತ ನಿರ್ವಹಿಸುವುದು ಮತ್ತು ಪತ್ರಗಳನ್ನು ವಿಲೇವಾರಿ ಮಾಡುವುದು.

## IV. ಕರ್ತವ್ಯದ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಸೂತ್ರಗಳು ವಿಧಿವಿಧಾನಗಳು:-

| | |
|---|---|
| ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | ಸರ್ಕಾರದ ಪ್ರದತ್ತವಾದ ಅಧಿಕಾರದಂತೆ ಆರ್ಥಿಕ ಬಟವಾಡೆ ಅಧಿಕಾರ ಆದ್ಯತೆ ಮೇರೆಗೆ ನಿರ್ವಹಿಸುವುದು. |
| ಹಿರಿಯ ಮೋ.ವಾ.ನಿ/ ಮೋಟಾರು ವಾಹನ ನಿರೀಕ್ಷಕರುಗಳು | ಅಂತರ ರಾಜ್ಯಗಳಿಂದ ರಾಜ್ಯ ಪ್ರವೇಶಿಸುವ ಪ್ರವಾಸಿ ವಾಹನಗಳ ತಪಾಸಣೆ ಮಾಡಿ ತೆರಿಗೆ ಶುಲ್ಕ ದಂಡ ವಸೂಲು ಮಾಡುವ ಕಾರ್ಯನಿರ್ವಹಿಸಿರುವುದು. |
| ದ್ವಿತೀಯ ದರ್ಜೆ ಸಹಾಯಕ | ಮೋಟಾರು ವಾಹನ ತನಿಖಾಧಿಕಾರಿಗಳು ವಸೂಲಿಸಿದ ತೆರಿಗೆ ದಂಡ ಮತ್ತು ಶುಲ್ಕದ ರಾಜಸ್ವವನ್ನು ವಹಿಗಳಿಗೆ ನಮೂದು ತೆಗೆದುಕೊಂಡು ಸರ್ಕಾರಕ್ಕೆ ಆ ದಿನವೇ ಜಮಾ ಮಾಡುವುದು, |

| | |
|---|---|
| | ಅಂಕಿ-ಅಂಶಗಳನ್ನು ತಯಾರಿಸಿವುದು, ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸುವುದು, ವೇತನ ಬಿಲ್ಲು ಮಾಡುವುದು. |
| ಡಿ. ದರ್ಜೆ ನೌಕರರು | ಅಂತರ ರಾಜ್ಯಗಳಿಂದ ಪ್ರವೇಶಿಸುವ ಎಲ್ಲಾ ವಾಹನಗಳನ್ನು ದಾಖಲಾತಿಗಳ ಪರಿಶೀಲನೆಗಾಗಿ ನಿಲ್ಲಿಸುವ ಕಾರ್ಯ ನಿರ್ವಹಣೆ. |
| ಗೃಹ ರಕ್ಷಕದಳದ ಸಿಬ್ಬಂದಿಗಳು | ಅಧಿಕಾರಿಗಳು ನೀಡಿದ ಸೂಚನೆಯಂತೆ ಹಾಗೂ ಎಲ್ಲಾ ಪ್ರವರ್ಗ ವಾಹನಗಳನ್ನು ದಾಖಲಾತಿ ಪರಿಶೀಲನೆ ನಿಲ್ಲಿಸುವುದು ಮತ್ತು ಕಳುಹಿಸುವುದರ ಕಾರ್ಯ |

## V. ಕಛೇರಿಯಲ್ಲಿ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ಬಳಸುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.

1. ಕಛೇರಿ ಕಾರ್ಯ ವಿಧಾನ ಕೈಪಿಡಿ.
2. ಕರ್ನಾಟಕ ನಾಗರೀಕ ಸೇವಾ ನಿಯಮ 1957.
3. ಕರ್ನಾಟಕ ಆರ್ಥಿಕ ಸಂಹಿತೆ 1958.
4. ಕರ್ನಾಟಕ ಖಜಾನೆ ಸಂಹಿತೆ 1963.
5. ಸಾದಿಲ್ವಾರು ವೆಚ್ಚ ಕೈಪಿಡಿ 1958.
6. ಮಾಹಿತಿ ಹಕ್ಕು ಅಧಿನಿಯಮ 2005.
7. ಕರ್ನಾಟಕ ಮೋಟಾರು ವಾಹನ ನಿಯಮ 1989.
8. ಭಾರತೀಯ ಮೋಟಾರು ವಾಹನ ಕಾಯಿದೆ 1988.
9. ಕೇಂದ್ರ ಮೋಟಾರು ವಾಹನ ನಿಯಮ 1989.
10. ಮೋಟಾರು ವಾಹನ ತೆರಿಗೆ ಕಾಯಿದೆ 1957.
11. ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಸರ್ಕಾರಿ ಆದೇಶ, ಅಧಿಸೂಚನೆ, ಮತ್ತು ಸುತ್ತೋಲೆಗಳು ಇತ್ಯಾದಿ.
12. ಇತರೆ ಮಾಹಿತಿಗಳು.

## VI. ಕಛೇರಿ ಹೊಂದಿರುವ ದಾಸ್ತಾವೇಜುಗಳು ವಿವರ:

1. ಸಾಮಾನ್ಯ ಸ್ವೀಕೃತಿ ವಹಿಗಳು.
2. ರವಾನೆ ವಹಿಗಳು.
3. ಅಂಚೆ ಸ್ಟಾಂಪುಗಳ ವಹಿಗಳು.
4. ನಗದು ಪುಸ್ತಕಗಳು.
5. ಹಾಜರಾತಿ ಪುಸ್ತಕಗಳು.
6. ಖರ್ಚುವೆಚ್ಚಗಳ ಡಿ.ಸಿ.ಬಿಲ್ ವಹಿಗಳು.
7. ಚೆಕ್ಕು ಸ್ವೀಕೃತಿ ವಹಿ.
8. ರಜೆ ಲೆಕ್ಕ ಪುಸ್ತಕ.
9. ಖಜಾನೆ ಟೋಕನ್ ಪುಸ್ತಕ.
10. ಬಟವಣೆ ವಹಿ.
11. ಟಿ.ಎ ಬಿಲ್ಲು ವಹಿ.
12. ಪೀಠೋಪಕರಣ ವಹಿ.
13. ಚಲನ ವಲನ ವಹಿ.
14. ಹಣ ಘೋಷಣೆ ವಹಿ.
15. ಸಾಮಾನ್ಯ ರಶೀದಿ ಸ್ವೀಕೃತಿ ವಹಿ.
16. ಸಾಮಾನ್ಯ ರಶೀದಿ ಪುಸ್ತಕ.
17. ಗಣಕೀಕರಣ ಚಲನ್ ಗಳನ್ನು ಉಪಯೋಗಿಸಿದ ದೈನಂದಿನ ವಹಿ.

**VII. ಮತ್ತು VIII. ಕಾರ್ಯ ನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ. ಜನಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯತೆ ಇರುವ ವ್ಯವಸ್ಥೆಗಳ ವಿವರಗಳು:**

ಕಛೇರಿ ಕಾರ್ಯ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಿರುವ ಕುರಿತು ಜನಪ್ರತಿನಿಧಿಗಳ ಜೊತೆಯಲ್ಲಿ ಸಮಾಲೋಚನೆ ಅಥವಾ ಪ್ರಾತಿನಿಧ್ಯತೆ ಇರುವ ವ್ಯವಸ್ಥೆ ತನಿಖಾಠಾಣೆಯಲ್ಲಿ ಇರುವುದಿಲ್ಲ.

**IX. ಕಛೇರಿ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ:**

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿದ್ದು, ಸರ್ಕಾರ ಮತ್ತು ಇಲಾಖೆ ನೀಡಿದ ಹಕ್ಕು ಬಾಧ್ಯತೆಗಳಿಗಣುಗುಣವಾಗಿ ಕರ್ತವ್ಯ ನಿರ್ವಹಣೆ.

**ಕಛೇರಿಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ:**

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ಕಾರ್ಯಕಾರಿ | ಖಾಲಿ ಹುದ್ದೆ |
|---|---|---|---|---|
| 1. | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ | 01 | -- | 01 |

**X. ಕಛೇರಿಯ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು:-**

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಸಂಬಳ |
|---|---|---|
| 1. | ಕೆ.ಎಂ.ವಿಜೇಂದ್ರ<br>ಪ್ರಭಾರ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,<br>ಪುಣಜನೂರು ತನಿಖಾ ಠಾಣೆ, ಪುಣಜನೂರು. | |

**XI. ಯೋಜನೆಗಳು, ವಿವರಗಳು, ವಾಸ್ತವಿಕ ವೆಚ್ಚಗಳು ಮತ್ತು ಬಟವಾಡೆ ಮಾಡಿದ ವಿವರಗಳನ್ನೊಳಗೊಂಡಂತೆ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಆಯಾವ್ಯಯ.**

ಕಛೇರಿಯಲ್ಲಿ ಯಾವುದೇ ಯೋಜನೆಯ ಕಾರ್ಯಕ್ರಮಗಳನ್ನು ರೂಪಿಸಿಲ್ಲವಾದ್ದರಿಂದ ಆಯಾವ್ಯಯ ಹಂಚಿಕೆ ಮಾಡಿರುವುದಿಲ್ಲ.

**XII. ಕಛೇರಿಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಹಾಗೂ ಫಲಾನುಭವಿಗಳ ವಿವರಗಳು.**

ಕಛೇರಿಯಲ್ಲಿ ಯಾವುದೇ ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುವುದಿಲ್ಲ.

**XIII. ವಿಭಾಗದಲ್ಲಿ ದೊರೆಯುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರ**

ಇರುವುದಿಲ್ಲ.

**XIV. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯಗಳನ್ನು ಬಳಕೆಗೆ ನಿರ್ವಹಿಸುವಲ್ಲಿ**

**ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ**

**ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲು ಇರುವ ಅನುಕೂಲತೆಗಳು**

ತನಿಖಾ ಠಾಣೆಯಲ್ಲಿ ಯಾವುದೇ ಗ್ರಂಥಾಲಯ ಬಳಕೆ ಇರುವುದಿಲ್ಲ.

**XV. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಹುದ್ದೆ ಹಾಗೂ ಇತರ ವಿವರಗಳು.**

| ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು ಪದನಾಮ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ | ದೂರವಾಣಿ ಸಂಖ್ಯೆ |
|---|---|---|
| ಶ್ರೀ ಕೆ.ಎಂ.ವಿಜೇಂದ್ರ,<br>ಪ್ರಭಾರ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,<br>ಪುಣಜನೂರು ತನಿಖಾ ಠಾಣೆ,<br>ಪುಣಜನೂರು. | ಶ್ರೀ ಜಿ.ರಾಜಣ್ಣ,<br>ಪ್ರಥಮ ದರ್ಜೆ ಸಹಾಯಕರು,<br>ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ,<br>ಪುಣಜನೂರು ತನಿಖಾ ಠಾಣೆ,<br>ಪುಣಜನೂರು. | 08226-211479 |

**XVI. ಇತರ ಯಾವುದೇ ನಿಗದಿಪಡಿಸಿದ ಮಾಹಿತಿ:**

-------------ಇಲ್ಲಾ--------------